# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IV A | ಬೆಂಗಳೂರು, ಗುರುವಾರ, ೩೧, ಮಾರ್ಚ್, ೨೦೨೨(ಚೈತ್ರ, ೧೦, ಶಕವರ್ಷ, ೧೯೪೪)<br>BENGALURU, THURSDAY, 31, MARCH, 2022(CHAITHRA, 10, SHAKAVARSHA, 1944) | ನಂ. ೨೧೨<br>No. 212 |
|---|---|---|


## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 14 ಸೇವನೆ 2022

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 31.03.2022.

## ಅಧಿಸೂಚನೆ

ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021 ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕೆ ದಿನಾಂಕ: 21.02.2022 ರ ಅಧಿಸೂಚನೆ ಸಂಖ್ಯೆ ಸಿಆಸುಇ 14 ಸೇವನೆ 2022 ರಲ್ಲಿ ಪ್ರಕಟಿಸಿರುವ ಈ ಮುಂದಿನ ನಿಯಮಗಳ ಕರಡನ್ನು ಅಧಿಕೃತ ರಾಜ್ಯಪ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ: 21.02.2022 ರ ಕರ್ನಾಟಕ ರಾಜ್ಯಪತ್ರದ ಭಾಗ IV-ಎ ರಲ್ಲಿ ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮ, 1978 (1990 ರ ಕರ್ನಾಟಕ ಅಧಿನಿಯಮ 14)ರ 3ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎ) ಖಂಡವನ್ನು ಪ್ರಕರಣದ 8ರೊಂದಿಗೆ ಓದಿಕೊಂಡು ಅಗತ್ಯಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ;

ಸದರಿ ರಾಜ್ಯಪತ್ರವನ್ನು ದಿನಾಂಕ: 21.02.2022 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡಿನ ಬಗ್ಗೆ ಆಕ್ಷೇಪಣೆ ಮತ್ತು ಸಲಹೆಗಳು ಸ್ವೀಕೃತವಾಗಿದ್ದು ಅವುಗಳನ್ನು ರಾಜ್ಯ ಸರ್ಕಾರವು ಪರಿಶೀಲಿಸಿರುವುದರಿಂದ;

ಈಗ ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮ, 1978 (1990 ರ ಕರ್ನಾಟಕ ಅಧಿನಿಯಮ 14) ರ 3ನೇ ಪ್ರಕರಣದ (1) ನೇ ಉಪ ಪ್ರಕರಣವನ್ನು 8ನೇ ಪ್ರಕರಣದೊಂದಿಗೆ ಓದಿಕೊಂಡಂತೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

## ನಿಯಮಗಳು

**1. ಶೀರ್ಷಿಕೆ ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) (1ನೇ ತಿದ್ದುಪಡಿ) ನಿಯಮಗಳು, 2022 ಎಂದು ಕರೆಯತಕ್ಕದ್ದು.

(2) ಇವು ಅಧಿಕೃತ ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ನಿಯಮ 5 ರ ತಿದ್ದುಪಡಿ.-** ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2021ರ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ) 5ನೇ ನಿಯಮದಲ್ಲಿನ, ಐದನೇ ಪರಂತುಕದಲ್ಲಿ, "ಗ್ರೂಪ್ ಸಿ ಮತ್ತು ಡಿ" ಎಂಬ ಪದಗಳ ಬದಲಿಗೆ "ಗ್ರೂಪ್ ಬಿ, ಸಿ, ಮತ್ತು ಡಿ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

**3. ನಿಯಮ 6 ರ ತಿದ್ದುಪಡಿ.-** ಸದರಿ ನಿಯಮಗಳ ನಿಯಮ 6 ರಲ್ಲಿ,-

(i) (1) ನೇ ಉಪ ನಿಯಮದ ಖಂಡ (ಎ) ರಲ್ಲಿ, "200" ಎಂಬ ಅಂಕಿಗಳ ಬದಲಾಗಿ, "300" ಎಂಬ ಅಂಕಿಗಳನ್ನು ಪ್ರತಿಸ್ಥಾಪಿಸತಕ್ಕದ್ದು; ಮತ್ತು

(ii) (2) ನೇ ಉಪ ನಿಯಮದ ಖಂಡ (ಎ) ಮತ್ತು ಖಂಡ (ಬಿ) ರಲ್ಲಿ, "ಪರೀಕ್ಷೆಯು ಎರಡು ಪತ್ರಿಕೆಗಳನ್ನು ಒಳಗೊಂಡಿರತಕ್ಕದ್ದು" ಎಂಬ ಪದಗಳ ನಂತರ "ವಸ್ತುನಿಷ್ಠ ಬಹು ಆಯ್ಕೆ ಮಾದರಿಯಲ್ಲಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

**4. ನಿಯಮ 9 ರ ತಿದ್ದುಪಡಿ.-** ಸದರಿ ನಿಯಮಗಳ ನಿಯಮ 9 ರಲ್ಲಿ,-

(i) ಶಿರೋನಾಮೆಯಲ್ಲಿ, "ಮತ್ತು ಗ್ರೂಪ್-ಬಿ" ಎಂಬ ಪದಗಳು ಮತ್ತು ಅಕ್ಷರವನ್ನು ಕೈಬಿಡತಕ್ಕದ್ದು; ಮತ್ತು

(ii) (1) ನೇ ಉಪ ನಿಯಮದಲ್ಲಿ,-

(ಎ) "ಮತ್ತು ಬಿ" ಎಂಬ ಪದ ಮತ್ತು ಅಕ್ಷರವನ್ನು ಕೈಬಿಡತಕ್ಕದ್ದು; ಮತ್ತು

(ಬಿ) "50" ಎಂಬ ಅಂಕಿಗಳು ಎಲ್ಲೆಲ್ಲಿ ಬರುವುದೋ, ಅಲ್ಲಿ "25" ಎಂಬ ಅಂಕಿಗಳನ್ನು ಪ್ರತಿಸ್ಥಾಪಿಸತಕ್ಕದ್ದು.

**5. ನಿಯಮ 11ರ ತಿದ್ದುಪಡಿ.**- ಸದರಿ ನಿಯಮಗಳ ನಿಯಮ 11 ರ ಉಪ ನಿಯಮ (2)ರಲ್ಲಿ,

(i) "ಮತ್ತು ಗ್ರೂಪ್-ಬಿ" ಎಂಬ ಪದ ಮತ್ತು ಅಕ್ಷರವನ್ನು ಕೈಬಿಡತಕ್ಕದ್ದು; ಮತ್ತು

(ii) "ಗ್ರೂಪ್-ಸಿ" ಎಂಬ ಪದ ಮತ್ತು ಅಕ್ಷರದ ಬದಲಾಗಿ, "ಗ್ರೂಪ್-ಬಿ ಮತ್ತು ಗ್ರೂಪ್-ಸಿ" ಎಂಬ ಪದಗಳು ಮತ್ತು ಅಕ್ಷರವನ್ನು ಪ್ರತಿಸ್ಥಾಪಿಸತಕ್ಕದ್ದು.

**6. ಉಳಿಸುವಿಕೆ:-** ಈ ನಿಯಮಗಳು ಅಧಿಸೂಚನೆಗಳನ್ನು ಹೊರಡಿಸಿ, ಪರೀಕ್ಷಾ ಪ್ರಕ್ರಿಯೆಯನ್ನು ಪ್ರಾರಂಭಿಸಿರದ ಎಲ್ಲಾ ನೇಮಕಾತಿಗಳಿಗೆ ಅನ್ವಯವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ತೇಜಾವತಿ. ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ-3
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-ವಿಶೇಷ ಕೋಶ).

## GOVERNMENT OF KARNATAKA

NO. DPAR 14 SCR 2022 Karnataka Government Secretariat,
Vidhana Soudha,
Bengaluru, dated: 31.03.2022.

## NOTIFICATION

Whereas the draft of the following rules to further to amend the Karnataka Civil Services (Direct Recruitment) (General) Rules, 2021 was published as required by clause (a) of sub-section (2) of Section 3 read with Section 8 of the Karnataka State Civil services Act, 1978 (Karnataka Act 14 of 1990) in Notification No. DPAR 14 SCR 2022 dated: 21.02.2022 in Part IV-A of the Karnataka Gazette Extraordinary dated 21.02.2022 inviting objections and suggestions from all persons likely to be affected thereby within fifteen days from the date of publication of the draft in the Official Gazette.

Whereas, the said Gazette was made available to the public on 21.02.2022.

And whereas, the objections and suggestions received have been considered by the State Government.

Now, therefore, in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990), the Government of Karnataka hereby makes the following rules, namely:-

## RULES

**1. Title and Commencement.-** (1) These rules may be called the Karnataka Civil Services (Direct Recruitment) (General) (1st Amendment) Rules, 2022.

(2) They shall come into force from the date of their final publication in the Official Gazette.

**2. Amendment of rule 5.-** In the Karnataka Civil Services (Direct Recruitment) (General) Rules, 2021 (hereinafter referred to as the said rules), in rule 5, in the fifth proviso, for the words “Group C and D”, the words “Group-B, C and D” shall be substituted.

**3. Amendment of rule 6.-** In rule 6 of the said rules,

(i) in sub-rule (1), in clause (a), for the figures “200”, the figures “300” shall be substituted.

(ii) in sub-rule (2), in clause (a) and clause (b), after the words “the examination shall consist of two papers” the words “in the form of objective multiple choice” shall be inserted.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



**4. Amendment of rule 9.-** In rule 9 of the said rules,

(i) in the heading, the words and letter “and Group-B” shall be omitted; and

(ii) in sub-rule (1),

(a) the word and letter “and B” shall be omitted; and

(b) for the figures “50” wherever they occur, the figures “25” shall be substituted.

**5. Amendment of rule 11.-** In rule 11 of the said rules, in sub-rule (2),

(i) the word and letter and Group-B” shall be omitted; and

(ii) for the word and letter “Group-C”, the words and letter “Group-B and Group-C” shall be substituted.

**6. Savings:-** These rules shall apply for all recruitments for which notifications have been issued but the examination process has not commenced.

By Order and in the name of the
Governor of Karnataka

(THEJAVATHI.N)
Under Secretary to Government-3
Department of Personnel and
Administrative Reforms
(Service Rules-Special Cell).

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE